ಆ) ಕಬಿನಿ ಏತ ನೀರಾವರಿ ಯೋಜನೆ ಮುಖ್ಯ ಕಾಲುವೆಯು 230 ಕಿ.ಮೀ. ಉದ್ದವಿದ್ದು ಅದರಲ್ಲಿ 30 ಕಿ.ಮೀ. ಸರ್ವೆ ಕೆಲಸಗಳು ಪೂರ್ಣಗೊಂಡಿವೆ. ಇದರ ಶಾಖಾ ಕಾಲುವೆಯು 25 ಕಿ.ಮೀ ಉದ್ದವಿದ್ದು, ಇದರಲ್ಲಿ 5 ಕಿ.ಮೀ. ಸರ್ವೆ ಕೆಲಸಗಳು ಪೂರ್ಣಗೊಂಡಿರುತ್ತದೆ. ಇದಲ್ಲದೆ ಅಂತರಸಂತೆ ಏತ ನೀರಾವರಿ ಕಾಲುವೆಯು 15 ಕಿ.ಮೀ. ಉದ್ದವಿದ್ದು ಇದರಲ್ಲಿ 2 ಕಿ.ಮೀ. ಸರ್ವೆ ಕೆಲಸಗಳು ಪೂರ್ಣಗೊಂಡಿರುತ್ತದೆ. ಉಳಿದ ಸರ್ವೆ ಕಾರ್ಯವು ಡಿಸೆಂಬರ್–03ರ ಒಳಗೆ ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಈ ಸರ್ವೆ ಕಾರ್ಯಕ್ಕಾಗಿ ರೂ. 33.81 ಲಕ್ಷಗಳು ಬೇಕಾಗಿರುತ್ತದೆ. ಇದಲ್ಲದೆ ಅಚ್ಚುಕಟ್ಟಿನ ಕಮಾಂಡ್ ಏರಿಯ ಸರ್ವೆ ಕಾರ್ಯಕ್ಕಾಗಿ ರೂ. 73.25 ಲಕ್ಷಗಳ ಅಂದಾಜು ತಯಾರಿಸಲಾಗಿದೆ.

ಇ) ಹೊಂಗನೂರು – ಹಿರೀಕೆರೆ ಏತ ನೀರಾವರಿ ಯೋಜನೆಯ ಅಂದಾಜು ಮೊತ್ತ ರೂ. 240.00 ಲಕ್ಷಗಳಾಗಿರುತ್ತದೆ. ಇದನ್ನು 2004–05 ರ ವರೆಗೆ ಪೂರ್ಣಗೊಳಿಸುವ ಕಾರ್ಯಕ್ರಮ ರೂಪಿಸಿಕೊಳ್ಳಲಾಗಿದೆ.

ರಾಜ್ಯದಲ್ಲಿ ಬೆಳೆ ವಿಮೆ ಯೋಜನೆ

3201 (2968) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬೆಳೆ ವಿಮೆ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ: ಜಾರಿಗೊಳಿಸಿದ್ದಲ್ಲಿ ಈ ಯೋಜನೆಯು ಯಾವಾಗಿನಿಂದ ಕಾರ್ಯರೂಪಕ್ಕೆ ಬಂದಿದೆ:

ಆ) ಈ ಬೆಳೆ ವಿಮೆ ಯೋಜನೆಗೆ ಅನುಸರಿಸುತ್ತಿರುವ ನೀತಿ ನಿಯಮಗಳಾವುವು:

ಇ) ಬೆಳೆ ವಿಮಾ ಯೋಜನೆಯಡಿ ಕಳೆದ 3 ವರ್ಷಗಳಿಂದ ಬಿಡುಗಡೆಯಾಗಿರುವ ಹಣವೆಷ್ಟು; ಜಿಲ್ಲಾವಾರು ವಿವರ ನೀಡುವುದು:

ಈ) ಬೆಳೆ ವಿಮಾ ಯೋಜನೆಯಡಿ ನಡೆದಿರುವಂತಹ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಹೌದು. ರಾಷ್ಟ್ರೀಯ ಕೃಷಿ ವಿಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, 2000ರ ಮುಂಗಾರು ಹಂಗಾಮಿನಿಂದ ರಾಜ್ಯದಲ್ಲಿ ಜಾರಿಗೆ ಬಂದಿರುತ್ತದೆ.

ಆ) ಕೇಂದ್ರ ಸರ್ಕಾರವು ನೀಡಿರುವ ಮಾರ್ಗ ಸೂಚಿಯ ಅನುಸಾರ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಇ) 2000–01ನೇ ಸಾಲಿನಲ್ಲಿ ಬೆಳೆ ನಷ್ಟ ಪರಿಹಾರವಾದ ರೂ. 4.06 ಕೋಟಿ ಹಾಗೂ 2001–02ರ ಸಾಲಿನಲ್ಲಿ ರೂ. 134.73 ಕೋಟಿಗಳನ್ನು ರೈತರಿಗೆ ವಿತರಿಸಲಾಗಿದೆ. 2002ರ ಮುಂಗಾರು ಹಂಗಾಮಿನ ಬೆಳೆ ನಷ್ಟ ಪರಿಹಾರವು ರೂ. 330.00 ಕೋಟಿ ಎಂದು ಭಾರತೀಯ ಸಾಮಾನ್ಯ ವಿಮಾ ನಿಗಮವು ಅಂದಾಜು ಮಾಡಿದ್ದು. ಶೀಘ್ರದಲ್ಲೇ ರೈತರಿಗೆ ವಿತರಿಸಲಾಗುವುದು. 2000–01ರ ಮತ್ತು 2001–02ರ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಹೌದು, ಗದಗ ಜಿಲ್ಲೆಯ ರೋಣ ತಾಲ್ಲೂಕಿನ 4 ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿಯಮಿತ ಸವಡಿ, ಹುಲ್ಲೂರ, ಅಸೂಟಿ ಮತ್ತು ಕುರಡಗಿಗಳಲ್ಲಿ ಅವ್ಯವಹಾರ ನಡೆದಿದೆಯೆಂದು

ಸರ್ಕಾರದ ಗಮನಕ್ಕೆ ಬಂದಿದ್ದು, ಪ್ರಥಮ ಹಂತದ ತನಿಖೆಯಲ್ಲಿ ರೂ. 43.63 ಲಕ್ಷ ದುರುಪಯೋಗವಾಗಿದೆ ಎಂದು ತಿಳಿದು ಬಂದಿದೆ. ಹೆಚ್ಚಿನ ತನಿಖೆಗಾಗಿ ಈ ಪ್ರಕರಣವನ್ನು ಸಿ.ಓ.ಡಿ.ಗೆ ವಹಿಸಲಾಗಿದೆ.

ಅನುಬಂಧ

2000-01 ಮತ್ತು 2001-02ನೇ ಸಾಲಿನಲ್ಲಿ ಬೆಳೆ ವಿಮಾ ಯೋಜನೆಯಡಿಯಲ್ಲಿ ವಿತರಿಸಲಾದ ಬೆಳೆ ವಿಮಾ ನಷ್ಟ ಪರಿಹಾರ

ಕ್ರ.ಸಂ	ಜಿಲ್ಲೆ	ಮೊತ್ತ		ಮಹಾಕ್ಷೇತ್ರ
		2000-01	2001-02	ರೂ. ಲಕ್ಷಗಳಲ್ಲಿ
		ರೂ. ಲಕ್ಷಗಳಲ್ಲಿ		
1.	ಬೆಂಗಳೂರು(ನ) ಮತ್ತು (ಗ್ರಾ)	–	0.14	0.14
2.	ಬೆಳಗಾವಿ	2.38	343.02	345.4
3.	ಬಳ್ಳಾರಿ	0.94	7.40	8.34
4.	ಬೀದರ್	154.18	257.33	411.51
5.	ಬಿಜಾಪುರ	0.27	1.46	1.73
6.	ಚಿಕ್ಕಮಂಗಳೂರು	0.38	26.21	26.59
7.	ಚಿತ್ರದುರ್ಗ	3.04	122.03	125.07
8.	ದಕ್ಷಿಣ ಕನ್ನಡ	0.91	0.01	0.92
9.	ಧಾರವಾಡ	–	1350.55	1350.55
10.	ಗುಲ್ಬರ್ಗ	24.88	2188.94	2213.82
11.	ಹಾಸನ	3.68	26.64	30.32
12.	ಕೋಲಾರ	–	232.39	232.39
13.	ಮಂಡ್ಯ	3.03	1.83	4.86
14.	ಮೈಸೂರು	–	56.76	56.76
15.	ರಾಯಚೂರು	8.86	54.31	63.17
16.	ಶಿವಮೊಗ್ಗ	0.65	1758.24	1758.89
17.	ತುಮಕೂರು	2.38	895.64	898.02
18.	ಉತ್ತರ ಕನ್ನಡ	11.26	1837.04	1848.3
19.	ಕೊಡಗು	–	–	0
20.	ಕೊಪ್ಪಳ	0.03	16.24	16.27
21.	ಚಾಮರಾಜನಗರ	–	275.76	275.76
22.	ದಾವಣಗೆರೆ	0.94	257.94	258.88
23.	ಬಾಗಲಕೋಟೆ	1.18	13.57	14.75
24.	ಗದಗ	186.79	1005.28	1192.07

1	2	3	4	5
25.	ಹಾವೇರಿ	–	2744.47	2744.47
26.	ಉಡುಪಿ	–	–	0
	ಒಟ್ಟು	**405.78**	**13473.20**	**13878.98**

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿರುವ ನ್ಯಾಯ ಬೆಲೆ ಅಂಗಡಿಗಳು

3202 (3657) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಸಹಕಾರ ಸಂಘಗಳ ಮೂಲಕ ನಡೆಯುತ್ತಿರುವವರುಗಳ ಸಂಖ್ಯೆ ಎಷ್ಟು? ಖಾಸಗಿಯವರ ಮೂಲಕ ನಡೆಯುತ್ತಿರುವವರ ಸಂಖ್ಯೆ ಎಷ್ಟು?

ಆ) ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅವಕಾಶವಿದೆಯೇ: ಹಾಗಿದ್ದಲ್ಲಿ ಎಂತಹ ಸಂದರ್ಭಗಳಲ್ಲಿ ತೆರೆಯಲು ಅವಕಾಶವಿದೆ.

ಇ) ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವಾಗ ಅನುಸರಿಸಲಾಗುವ ನೀತಿ ನಿಯಮಗಳೇನು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 84
67
17

ಆ) ಇದೆ.

ಪಡಿತರ ಚೀಟಿಗಳ ಲಭ್ಯತೆಯ ಸಂಖ್ಯೆ ಮತ್ತು ಅಂತರ ಆಧರಿಸಿ ಹೊಸ ನ್ಯಾಯಬೆಲೆ ಅಂಗಡಿ ತೆರೆಯಲು ಅವಕಾಶ ಮಾಡಿಕೊಡಲಾಗುವುದು. ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಟ 300 ಹಾಗೂ ನಗರ ಪಟ್ಟಣ ಪ್ರದೇಶಗಳಲ್ಲಿ ಕನಿಷ್ಟ 500 ಪಡಿತರ ಚೀಟಿಗಳು ಲಭ್ಯವಿದ್ದಲ್ಲಿ ಸಾರ್ವಜನಿಕ ಬೇಡಿಕೆಯನ್ನಾಧರಿಸಿ ಹೊಸ ನ್ಯಾಯಬೆಲೆ ಅಂಗಡಿ ತೆರೆಯಲು ಅವಕಾಶವಿರುತ್ತದೆ.

ಇ) ಕರ್ನಾಟಕ ಅಗತ್ಯ ವಸ್ತುಗಳ (ಸಾ.ವಿ.ವ) ನಿಯಂತ್ರಣ ಆದೇಶ 1992ರ ನಿಯಮಾನುಸಾರ ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗುವುದು. ಜೊತೆಗೆ ಈ ಆದೇಶ ತಿದ್ದುಪಡಿ ಮಾಡಿ, ಸ್ತ್ರೀ ಶಕ್ತಿ ಗುಂಪುಗಳಿಗೆ, ಆದ್ಯತೆ ಕೊಡುವ ಕ್ರಮ ಜರುಗಿದೆ.

ರಾಜ್ಯದಲ್ಲಿ ಯಶಸ್ವಿನಿ ವಿಮಾ ಯೋಜನೆ

3203 (3658) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಶಸ್ವಿನಿ ವಿಮಾ ಯೋಜನೆ ಎಂದಿನಿಂದ ಜಾರಿಗೆ ಬಂದಿದೆ;

ಆ) ಇದರ ಸಾಧಕ – ಬಾದಕಗಳೇನು?

ಇ) ಗ್ರಾಮಾಂತರ ಪ್ರದೇಶಗಳ ಯಾವ ಯಾವ ಸಹಕಾರ ಸಂಘಗಳಲ್ಲಿ ರೈತರು ಸದಸ್ಯರಾಗಬಹುದು; ಮಾಸಿಕ ಕಂತಿನ ಮೊಬಲಗು ಎಷ್ಟು;